ಶ್ರೀ ಬಿ. ಹುಚ್ಚೇಗೌಡರು.—ಒಂದೊಂದು ಬಸ್ಸು ಉಪಯೋಗ ಮಾಡುವುದು ಸುಮಾರು 200 ಸಂಸಾರ ಕ್ಕಾಗುವಷ್ಟೆಂಬುದು ತಮಗೆ ಗೊತ್ತಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಸ್ಸುಗಳಿಗೆ ಎಷ್ಟು ಖರ್ಚಾಗುತ್ತದೆಂಬುದನ್ನು ಹೇಳುವುದಕ್ಕಾಗುವು ದಿಲ್ಲ. ಈ ವರ್ಷ ಎಷ್ಟು ಕೂಪುಗಳನ್ನು ಕೊಟ್ಟಿದೆ ಯೆಂಬುದು ಗೊತ್ತಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಮುಂದಾದರೂ ಅದನ್ನು ತನಿಖೆ ಮಾಡುತ್ತೀರಾ?

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದರ ಅವಶ್ಯಕತೆಯೇನೂ ಇಲ್ಲ.

Mr. SPEAKER.—Question No. 100.

Sri H. SIDDAIYA (Minister for Revenue and Excise).—This may be kindly taken up to-morrow, because I thought Sri R. Chennigaramiah would answer this. To enable me to be in a better position to answer supplementaries, this may be taken up to-morrow.

Mr. SPEAKER.—Question No. 13.

Sri M. N. JOIS (Mysore District—General).—May I suggest that Question No. 79 may be taken up along with this question? It is also in this set.

Mr. SPEAKER.—Let Question No. 13 be over.

Gopal Rao Enquiry Committee.

*Q.—13. Mushir-ul-Mulk J. MAHOMED IMAM (Chitaldrug *cum* Tumkur—Muslim).—

Will the Government be pleased to state:—

(*a*) when the Gopal Rao Enquiry Committee was constituted;

(*b*) whether the Committee have prepared a report and sent it to Government;

(*c*) whether they will lay the report on the table;

(*d*) the total cost incurred so far on this Committee;

(*e*) the emoluments paid to the Chairman and the Members of the Committee?

*A.—Sri K. CHENGALARAYA REDDY (Chief Minister).—

(*a*) 7th March 1948.

(*b*) Yes.

(*c*) This will be considered after the report is examined by the Government.

(*d*) Rs. 1,15,219-3-3 up to end of February 1950.

(*e*) No extra emoluments were paid to the Chairman who was drawing his salary as Chief Justice.

Daily allowance and travelling allowance were paid to the Members at rates noted below for periods during which they were actually engaged on the work of the Committee. One of the Members did not draw the daily allowance so long as he was drawing his salary as President of the Constituent Assembly of Mysore.

Travelling Allowance.—
Double First Class.

Daily Allowance.—
Rupees twenty-five.

Janab J. MAHOMED IMAM.—Will the Government be pleased to state what the total amount of loss is as a result of these transactions with Gopala Rao?

Sri K. CHENGALARAYA REDDY.—To give the exact figure, I would require notice.

Janab J. MAHOMED IMAM.—Will the Government place the report of the Committee on the table of the House?

Sri K. CHENGALARAYA REDDY.—The report has just been received. After the Government consider the report, the question of either placing it before the House or not will be considered.

Janab J. MAHOMED IMAM.—Have the Government come to any conclusion about it? Will they promise to place the report on the table at least after considering it?

Sri K. CHENGALARAYA REDDY.—Government promise to consider it.

Janab J. MAHOMED IMAM.—So, Government have not made up their mind?

Sri K. CHENGALARAYA REDDY.—No.

Janab J. MAHOMED IMAM.—May I know whether the cost incurred so far on this Committee is charged to the Government or to the funds collected by the Committee?

Sri K. CHENGALARAYA REDDY.—They were charged to the funds collected by the Committee.

Janab J. MAHOMED IMAM.—Is it not necessary for the Government to ascertain the views of this House before they take up any action either disciplinary or otherwise for future guidance?

Sri K. CHENGALARAYA REDDY.—Not necessary in all cases.

Janab J. MAHOMED IMAM.—At least in some cases?

Sri K. CHENGALARAYA REDDY.—Yes. Government will consider it.

Janab J. MAHOMED IMAM.—Have the Government taken any action so far on the report?

Sri K. CHENGALARAYA REDDY.—Not yet, excepting that one officer who has been mentioned in the report has taken leave.

Janab J. MAHOMED IMAM.—Did that officer take leave as a result of this report?

Sri K. CHENGALARAYA REDDY.—It might be so, if the Hon'ble Member is pleased to draw his own inference.

Janab J. MAHOMED IMAM.—Did the officer take leave of his own accord or was he forced to take leave?

Sri K. CHENGALARAYA REDDY.—He has taken leave and Government have sanctioned the leave.

Janab J. MAHOMED IMAM.—Did the officer apply for leave?

Sri K. CHENGALARAYA REDDY.—Yes, I should think so.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಈ ವರೆಗೆ ಈ ಸಮಿತಿಯ ವಿಚಾರಣೆ ಕೆಲಸ ಕ್ಕಾಗಿ ಎಷ್ಟು ಹಣ ಖರ್ಚಾಯಿತು?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸುಮಾರು 43 ಲಕ್ಷ ರೂಪಾಯಿಗಳು.

ಶ್ರೀ ಕಡಿದಾಳ್ ಮಂಜಪ್ಪನವರು.—ರೂಪಾಯಿಗೆ ಎಷ್ಟಾಣೆಯಂತೆ ಕೊಡಲಾಗಿದೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ರೂಪಾಯಿಗೆ ಆರಾಣೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಗೋಪಾಲರಾಯರು ಈಗ ಎಲ್ಲಿದ್ದಾರೆ?

Sri K. CHENGALARAYA REDDY.—I must institute an enquiry.

ಶ್ರೀ ಕಡಿದಾಳ್ ಮಂಜಪ್ಪನವರು.—ಅವರಿಗೆ ಕೊಟ್ಟಿದ್ದ, "ಧರ್ಮರತ್ನಾಕರ" ಎಂಬ ಬಿರುದನ್ನು ವಾಪಸು ತೆಗೆದುಕೊಂಡಿದೆಯೆ?

Sri K. CHENGALARAYA REDDY.—The jewel has been surrendered to the Government.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈ ವರದಿಯಲ್ಲಿ ವರಮಾನ ತೆರಿಗೆಯನ್ನು ತಪ್ಪಿಸಿಕೊಂಡಿರುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಿದೆಯೇ?

Sri K. CHENGALARAYA REDDY.—As I said, we have not gone through the report fully as yet. That aspect has been covered in the report.

ಶ್ರೀ ಜಿ. ವೀರಪ್ಪನವರು.—ಆ ರೀತಿ ಕ್ರಮ ತೆಗೆದು ಕೊಳ್ಳಬೇಕೆಂದು ಯೋಚನೆ ಮಾಡಲಾಗಿದೆಯೆ?

Sri K. CHENGALARAYA REDDY.—I have already said that the whole report is still under the consideration of Government. Before considering it fully, I am not in a position to say anything definitely.

ಶ್ರೀ ಜಿ. ವೀರಪ್ಪನವರು.—ಗೋಪಾಲರಾಯರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಯೋಚನೆ ಮಾಡುತ್ತೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಎಲ್ಲವನ್ನೂ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಂ. ಎಕ್. ಜೋಯಿಸರು (ಮೈಸೂರು ಜಿಲ್ಲೆ).—(d) ಪ್ರಶ್ನೆಗೆ ಉತ್ತರವಾಗಿ ರೂ. 1,15,219-3-3 ಖರ್ಚಾಗಿದೆಯೆಂದು ಹೇಳಿದ್ದೀರಿ. ಅದರಲ್ಲಿ ಏನೇನು ಸೇರಿದೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದರಲ್ಲಿ ಆ ಸಮಿತಿಗಾಗಿ ಯಾವ್ಯಾವ ಖರ್ಚಾಗಿದೆಯೋ ಅದೆಲ್ಲಾ ಸೇರಿದೆ. ಸದಸ್ಯರ ಟಿ. ಎ., ಡಿ.ಎ, ಮಂಜೂರಾಗಿರುವ ಸಿಬ್ಬಂದಿಯ ಸಂಬಳ ಸಾರಿಗೆ ಮುಂತಾದ್ದೆಲ್ಲಾ ಸೇರಿದೆ.

ಶ್ರೀ ಎಂ. ಎಕ್.,ಜೋಯಿಸರು.—ತಮ್ಮ ಸಿಬ್ಬಂದಿಯ ಪೂರ್ತಿ ಸಂಬಳವು ಅದರಲ್ಲಿ ಸೇರಿದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದರಲ್ಲೇ ಪೂರ್ತಿಯಾಗಿ ಕೆಲಸ ಮಾಡುವವರಿಗೆ ಸಂಪೂರ್ಣವಾಗಿ ಅದರಲ್ಲೇ ಸೇರಬೇಕು.

ಶ್ರೀ ಎಂ. ಎಕ್. ಜೋಯಿಸರು.—ಈ ಸಮಿತಿಗೆ ಯಾರಾದರೂ full-time officer ನ್ನು ನೇಮಕ ಮಾಡಿದ್ದೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೌದು; ಮಾಡಿದ್ದೇವೆ.

ಶ್ರೀ ಎಂ. ಎಕ್. ಜೋಯಿಸರು — ಯಾರು?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮ್ಯಾನೇಜರು, ಒಬ್ಬಿಬ್ಬರು ಸ್ಟೆನೋಟೈಪಿಸ್ಟುಗಳು ಮತ್ತು ಎಗ್ಜಿಕ್ಯುಟಿವ್ ಸಿಬ್ಬಂದಿ ನೇಮಕ ಮಾಡಿದ್ದೇವೆ.

ಶ್ರೀ ಎಂ. ಎಕ್. ಜೋಯಿಸರು.—ಒಬ್ಬರು ಡಿ. ಎಸ್. ಪಿ. ಗಳನ್ನು ಸೆಕ್ರೆಟರಿಯಾಗಿಯೂ, ಚಿಫ್ ಜಸ್ಟಿಸ್‌ರವರನ್ನು ಸಮಿತಿಯ ಛೇರ್‌ಮನ್ ಆಗಿಯೂ ನೇಮಕ ಮಾಡಿದ್ದಿರಿ, ಅವರ ಪೂರ್ತಿ ಸಂಬಳವು ಇದರಲ್ಲಿ ಸೇರಿದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದು ಅರ್ಧಂಬರ್ಧ ಸೇರಿರಬಹುದೆಂದು ಕಾಣುತ್ತದೆ. ಸರಿಯಾಗಿ ವಿಚಾರ ಮಾಡಿ ಹೇಳಬೇಕು.

ಶ್ರೀ ಎಂ. ಎಕ್. ಜೋಯಿಸರು.—ಹಾಗಾದರೆ ಈಗ ಈ ಒಂದುಲಕ್ಷ ಹದಿನೈದು ಸಾವಿರ ಚಿಲ್ಲರೆ ಖರ್ಚಿನಲ್ಲಿ ಅರ್ಧಂಬರ್ಧ ಸಂಬಳಗಳೂ ಸೇರಿವೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಹೌದು. ಕೆಲವು ಅಧಿಕಾರಿಗಳನ್ನು ಪ್ರತ್ಯೇಕವಾಗಿ ಈ ಕೆಲಸಕ್ಕೇ ಕೊಡಲಾಗಿತ್ತು. ಅವರ ಸಂಪೂರ್ಣ ಸಂಬಳ, ಖರ್ಚು

ಎಲ್ಲಾ ಇದಕ್ಕೇ ಸೇರಿಸಲಾಗಿದೆ. ಚಿಫ್‌ಜಸ್ಟಿಸ್‌ರವರು ಮತ್ತು ಸೆಕ್ರೆಟೆರಿಯವರು ಅಲ್ಲಿ ಪಾರ್ಟ್ ಟೈಂ ಆಫೀಸರಾಗಿ ಕೆಲಸ ಮಾಡುತ್ತಿದ್ದರು. ಆದ್ದರಿಂದ ಪ್ರೊಫೇಷನೇಟ್ ಆಗಿ ಅವರ ಸಂಬಳ ಅದಕ್ಕೆ ಖರ್ಚಾಗಿದೆ. So also in the case of Hon'ble President of the Constituent Assembly who was also a member of the Committee.

ಶ್ರೀ ಎಂ. ಎಸ್. ಜೋಯಿಸರು.—ಈ ಸಮಿತಿಯವರು ಎಷ್ಟು ವರ್ಷಗಳ ಕಾಲ ಕೆಲಸಮಾಡಿದರು?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸುಮಾರು $1\frac{1}{2}$ ವರ್ಷ ಅವಧಿಯಲ್ಲಿದ್ದರೂ, ಕೆಲಸ ಮಾಡಿರುವುದು ಕೆಲವು ಕಾಲ ಮಾತ್ರ.

ಶ್ರೀ ಎಂ. ಎಸ್. ಜೋಯಿಸರು.—ಹಾಗೆ ಅವರು ಕೆಲಸ ಮಾಡುವಾಗ ಒಂದು ದಿವಸಕ್ಕೆ ಎಷ್ಟು ಗಂಟೆಯ ಕಾಲ ಕೆಲಸ ಮಾಡಿದರು?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಬೇಕು.

ಶ್ರೀ ಎಂ. ಎಸ್. ಜೋಯಿಸರು.—ಅವರು ಸಾಮಾನ್ಯವಾಗಿ ಕೆಲವು ದಿವಸಗಳು ಬೆಳಿಗ್ಗೆ 8 ರಿಂದ ರಾತ್ರಿ 9 ರವರೆಗೆ ಕೆಲಸ ಮಾಡಿದರು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನನಗಿಂತಲೂ ಅವರಿಗೇ ಚೆನ್ನಾಗಿ ಗೊತ್ತಿರಬೇಕು.

ಶ್ರೀ ಎಂ. ಎಸ್. ಜೋಯಿಸರು.—ಸಮಾಚಾರ ಯಾರಾದರೂ ಒಬ್ಬರು ಕೊಡಲೇಬೇಕು. ಈ ಸಮಿತಿ ಹಿಂದೆ ಬಂದಿದ್ದ ಠರಾವಿನ ಪರಿಣಾಮವಾಗಿ ಆರಂಭವಾಯಿತೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದನ್ನು ಗಮನಿಸಿಯೇ ಈ ಸಮಿತಿ ಮಾಡಿರುವುದು.

ಶ್ರೀ ಎಂ. ಎಸ್. ಜೋಯಿಸರು.—ಪ್ರಜಾ ಪ್ರತಿನಿಧಿಗಳ ಕೋರಿಕೆಯಂತೆ ಏರ್ಪಾಟು ಮಾಡಿರುವ ಸಮಿತಿಯ ವರದಿಯನ್ನು ಪ್ರತಿನಿಧಿಗಳ ಮುಂದೆ ತರುವುದು ಸೂಕ್ತವಲ್ಲವೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದನ್ನು ಯೋಚನೆ ಮಾಡುತ್ತಿದ್ದೇವೆಂದು ಆಗಲೇ ಹೇಳಿದೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಒಂದು ಲಕ್ಷ ಚಿಲ್ಲರೆ ಖರ್ಚು ಮಾಡಿರುವುದನ್ನು ಸರ್ಕಾರದವರೇ ಕೊಡುತ್ತಾರೋ ಅಥವಾ ಬೇರೆ ಏನಾದರೂ ಏರ್ಪಾಡಿದೆಯೋ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದಕ್ಕೆ ಉತ್ತರ ಆಗಲೇ ಹೇಳಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಸಮಿತಿ ಸ್ಥಾಪನೆ ಮಾಡಿದ ಉದ್ದೇಶವೇನು?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸದುದ್ದೇಶ.

Sri H. M. CHANNABASAPPA.—What is the object?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆದು ಆ ಸಮಿತಿಯನ್ನು ಸ್ಥಾಪನೆ ಮಾಡಿರುವ ಸರ್ಕಾರದ ಆರ್ಡರಿನ preamble ನಲ್ಲೇ ಇದೆ. ಸದಸ್ಯರು ಅದನ್ನು ಓದಿರಬಹುದು.

Sri H. M. CHANNABASAPPA.—What was the primary object?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಗಲೇ ಉತ್ತರ ಹೇಳಿದಂತೆ ಸಮಿತಿಯನ್ನು ರಚನೆ ಮಾಡಿರುವ ಸರ್ಕಾರಿ ಆರ್ಡರಿನಲ್ಲೇ ಅದು ನಮೂದಿಸಲ್ಪಟ್ಟಿದೆ. ಲೇವಾದೇವಿಯಿಂದ ಅನೇಕರಿಗೆ ಬಹಳ ತೊಂದರೆಯಾಗಿರಬಹುದು, ಸರ್ಕಾರದ ಕಾನೂನು ಉಲ್ಲಂಘನೆಯಾಗಿರಬಹುದು ಎಂದು ತಿಳಿದು ಎಲ್ಲವನ್ನೂ ಸಹ ಸಂಪೂರ್ಣವಾಗಿ ಪರಿಶೀಲಿಸಿ ಪಾತ್ರರಾದವರಿಗೆ ಪರಿಹಾರ ಕೊಡುವುದೂ ಮತ್ತು ಇನ್ನೂ ಎಲ್ಲಾ ವಿಚಾರಗಳನ್ನೂ ತನಿಖೆ ಮಾಡುವುದೂ ಉದ್ದೇಶವಾಗಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ವರದಿಯನ್ನು ಪರಿಶೀಲಿಸಿದ ನಂತರ ಯಾರಾದರೂ ಶಿಕ್ಷೆಗೆ ಅರ್ಹರಾಗಿದ್ದರೆ ಅವರಿಗೆ ಶಿಕ್ಷೆ ವಿಧಿಸುತ್ತೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಎಲ್ಲಾ ಪರಿಶೀಲನೆಯಾದ ಮೇಲೆ ಯಾರಿಗಾದರೂ ಶಿಕ್ಷೆ ವಿಧಿಸುವುದು ಆವಶ್ಯಕವಾಗಿದ್ದರೆ ವಿಧಿಸುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಗೋಪಾಲರಾವ್ ವಿಚಾರಣಾ ಸಮಿತಿಯಲ್ಲಿ ತನಿಖೆಯಾದವರ ಹೆಸ್ಕಿ ಅಧಿಕಾರಿಗಳೆಷ್ಟು; ಅನಧಿಕಾರಿಗಳೆಷ್ಟು?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅಧಿಕಾರಿಗಳೂ ಇದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕೆಲವರು ಇದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಅವರಲ್ಲಿ ರಿಜ್ಯೆರ್ ಆದವರೆಷ್ಟು ಮತ್ತು ಅಧಿಕಾರದಲ್ಲಿರುವವರೆಷ್ಟು?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ನೋಟೀಸ್ ಕೊಟ್ಟರೆ ಹೇಳಬಹುದು. ಈಗ ಹೇಳಲು ಸಾಧ್ಯವಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು,—ಅಧಿಕಾರಿಗಳೂ ಇದ್ದಾರೆಂದು ಹೇಳಿದಿರಿ, ಅವರ ಹೆಸ್ಕಿಕೆ ನ್ಯಾಯರೀತಿಯಲ್ಲಿ ಹಣವನ್ನು ಸಂಪಾದನೆ ಮಾಡಿ ಅವರಿಗೆ ಕೊಟ್ಟಿದ್ದರೆಂದು ಕಂಡು ಬಂದಿದೆಯೇ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಇನ್ನೂ ಆ ವರದಿಯನ್ನು ಪರಿಶೀಲನೆ ಮಾಡುತ್ತಿದ್ದೇವೆ, ಈಗಲೇ ಇದನ್ನು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ ವರದಿಯ ಪರಿಶೀಲನೆ ಯಾವಾಗ ಮುಗಿಯುತ್ತದೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅದಷ್ಟು ಬೇಗ ಮುಗಿಯುತ್ತದೆ. ಈಗ ತಾನೇ ನಮಗೆ ಬಂದಿದೆ. ಈ ಅಧಿವೇಶನವಾದ ತಕ್ಷಣ ಅದನ್ನು ತೆಗೆದುಕೊಂಡು ಮುಗಿಸುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ವರದಿಯನ್ನು ಪರಿಶೀಲನೆ ಮಾಡಿ ಈ ಸಭೆಯ ಮುಂದಿನ ಅಧಿವೇಶನದಲ್ಲಿ ಸಭೆಯ ಮುಂದಿಡುವುದಕ್ಕೆ ಸಾಧ್ಯವೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಭೆಯ ಮುಂದೆ ಇಡುವುದೋ ಬಿಡುವುದೋ ಎಂಬುದೂ ಸರ್ಕಾರದವರ ಆಲೋಚನೆಯಲ್ಲಿದೆ.

ಶ್ರೀ ಎಸ್. ರಂಗನಾಮಯ್ಯನವರು (ಮೈಸೂರು ಜಿಲ್ಲೆ).—ಈ ಸಮಿತಿಯಿಂದ ಎಷ್ಟು ಹೊಬಲಗು ವಸೂಲಾಗಿದೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಆಗಲೇ ಹೇಳಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಸಮಿತಿ ಸದಸ್ಯರಿಗೆ ಪ್ರಯಾಣಭತ್ಯ ಫಸ್ಟ್‌ಕ್ಲಾಸ್ ಕೊಡುವುದಾಗಿ ತಿಳಿಸಿದೆ, ಅವರು ಇದ್ದ ಸ್ಥಳದಿಂದ ಕೊಡುತ್ತೀರೋ ಅಥವಾ ಒಂದು ನಿರ್ದಿಷ್ಟವಾದ ಸ್ಥಳದಿಂದ ಈ ಭತ್ಯವನ್ನು ಕೊಡುವುದೊ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸದಸ್ಯರು ಖಾಯಂ ಆಗಿ ವಾಸವಾಗಿರುವ ಹೆಡ್‌ಕ್ವಾರ್ಟರಿನಿಂದ ಕೊಟ್ಟಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಅನೇಕಸಾರಿ ಕೆಲವರು ಸಮಿತಿಯ ಕೆಲಸಕ್ಕಾಗಿ ಡೆಲ್ಲಿಯಿಂದ ಬರಬೇಕಾಗಿ ಬಂದು ಅವರಿಗೆ ಕೊಡುವ ಭತ್ಯದ ಮೊಬಲಗಿಗಿಂತ ಹೆಚ್ಚಾಗಿ ಖರ್ಚು ಮಾಡಬೇಕಾಯಿತೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಕೆಲವು ಸಂದರ್ಭದಲ್ಲಿ ಹಾಗಾಗಿದೆಯೆಂದು ತಿಳಿದು ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಿದ್ದಪಕ್ಷದಲ್ಲಿ ಅದಕ್ಕೆ ತಕ್ಕಂತೆ ಹೆಚ್ಚು ಮಾಡಲು ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಅವರು ದಾನ ಧರ್ಮಗಳನ್ನು ಮಾಡಿದ್ದಾರಲ್ಲ, ಅದನ್ನು ಏನು ಮಾಡುತ್ತೀರಿ!

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ತಮ್ಮ ಪ್ರಶೆ ಸರಿಯಾಗಿ ಗೊತ್ತಾಗಲಲ್ಲ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಸ್ಕೂಲು, ಕಾಲೇಜುಗಳನ್ನೂ ಮತ್ತು ಆಸ್ಪತ್ರೆಗಳನ್ನೂ ಕಟ್ಟಿಸಲು ಅವರು ಹಣವನ್ನು ದಾನ ಮಾಡಿದ್ದಾರೆ, ಅದನ್ನು ಏನು ಮಾಡುತ್ತೀರಿ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ದಾನ ಮಾಡಿದ್ದು ದಾನವಾಯಿತು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಶ್ರೀ ಗೋಪಾಲರಾಯರಿಗೆ ಸಹಾಯಕರಾಗಿ ನಿಂತು ಅವರ ವ್ಯವಹಾರಗಳಿಗೆ ಸಹಾಯ ಮಾಡಿದ ಅಧಿಕಾರಿಗಳ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಅದಕ್ಕೆ ಆಗಲೇ ಉತ್ತರ ಹೇಳಿದ್ದೇನೆ.

ಶ್ರೀ ಎ. ಜಿ. ರಾಮಚಂದ್ರರಾಯರು (ಹಾಸನ ಜಿಲ್ಲೆ).—ಹಂಚಿಕೆಯಾಗಿ ಏನಾದರೂ ಹಣ ಉಳಿದಿದೆಯೇ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಸ್ವಲ್ಪ ಉಳಿದಿದೆ.

ಶ್ರೀ ಎ. ಜಿ. ರಾಮಚಂದ್ರರಾಯರು.— ಇನ್ನೂ ವಸೂಲಾಗುತ್ತದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಕಾಣಲಿಲ್ಲ.

ಶ್ರೀ ಎ. ಜಿ. ರಾಮಚಂದ್ರರಾಯರು.—ಉಳಿದಿರುವ ಹಣವನ್ನು ಐದು ಸಾವಿರ ರೂಪಾಯಿಗಳಿಗಿಂತ ಕಡಿಮೆ ಕೊಟ್ಟವ್ವವರಿಗೆ ಹಂಚುವುದು ಸೂಕ್ತವಲ್ಲವೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಅವರೆಲ್ಲರಿಗೂ ಹಂಚಿದರೆ ತುಂಬ ಕಡಿಮೆ ಬರುತ್ತದೆ, ಅದನ್ನು ಯಾವ ರೀತಿ ವಿನಿಯೋಗಿಸಬೇಕು ಎಂಬುದು ಸರ್ಕಾರದ ಪರಿಶೀಲನೆಯಲ್ಲದೆ.

ಶ್ರೀ ಎ. ಜಿ. ರಾಮಚಂದ್ರರಾಯರು.—ಬಹಳ ಕಡಿಮೆ ಹಣ ಕೊಟ್ಟಿದ್ದವರಿಗೆ ಈ ಹಣವನ್ನು ಹಂಚುವ ವಿಚಾರವನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಮಾಡುತ್ತೇವೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಸ್ವಲ್ಪ ಹಣ ಉಳಿದಿದೆಯೆಂದು ಹೇಳಿದಿರಿ, ಇದನ್ನು ಸಮಿತಿಯ ಸದಸ್ಯರಿಗೆ ಲಂಪ್‌ಸಂ ಗ್ರಾಂಟು ರೂಪದಲ್ಲಿ ಕೊಡುವ ವಿಷಯ ಆಲೋಚನೆಯಲ್ಲದೆಯೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸರ್ಕಾರದವರು ಇದುವರೆಗೆ ಆ ರೀತಿಯಾಗಿ ಏನೂ ಯೋಚನೆ ಮಾಡಿಲ್ಲ.

Guests Entertained by Government.

Q. 15.) Mushir-ul Mulk J. MAHOMED IMAM (Chitaldrug *cum* Tumkur—Muslim).—Will the Government be pleased to state.—

(a) the number of guests that were entertained by the Government during the years 1948-49 and 1949-50;

(b) the cost incurred by them on this account during each year.

A. Sri K. CHENGALARAYA REDDY (Chief Minister).—

(a) 1,273 in the year 1948-49 and 665 in 1949-50 (Up to end of December 1949);

(b) Rs. 2,73,981-11-9 for 1948-49 and Rs. 1,21,439-12-11 for 1949-50 (Up to the end of December 1949).

ಜನಾಬ್ ಜೆ. ಮಹಮ್ಮದ್ ಇಮಾಂರವರು.—1948-49ರಲ್ಲಿ 1273 ಜನರೆಂದು ಉತ್ತರದಲ್ಲಲ್ಲದೆ. ಈ ಅಥಿತಿಗಳನ್ನು ತಾವೇ ಆಹ್ವಾನಿಸಿದ್ದಿರೋ ಅಥವಾ ಅವರಾಗಿಯೇ ಆಹ್ವಾನ ಮಾಡಿಕೊಂಡು ಬಂದರೊ?

Sri K. CHENGALARAYA REDDY.—The question cannot be divided so nicely like that. Certain persons who were coming here were treated as State Guests. There was no occasion where a person forced himself as a State Guest.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಅವರಲ್ಲಿ ಅನೇಕರು ನಾವು ಬರುತ್ತೇವೆ, ನಮ್ಮನ್ನು ಅತಿಥಿಗಳಾಗಿ ತೆಗೆ ದುಕೊಂಡು accommodate ಮಾಡಬೇಕೆಂದು ಬರೆದುಕೊಂಡಿದ್ದರೆ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.— ಹಾಗೆ ಬರೆಯುವುದಿಲ್ಲ. ಬೆಂಗಳೂರಿಗೆ ಯಾರಾದರೂ ದೊಡ್ಡ ಅತಿಥಿಗಳು ಬರಬೇಕಾದರೆ ಇಲ್ಲಿ ಅವರಿಗೆ accommodation ದೊರೆಯುವುದು ಕಷ್ಟವಾಗಿರುವುದರಿಂದ, accommodation ಏರ್ಪಾಡು ಮಾಡಿ ಕೊಡಿ ಎಂದು ಬರೆಯುತ್ತಾರೆ.

ಜನಾಬ್ ಜೆ. ಮಹಮ್ಮದ್ ಇಮಾಂರವರು.—"ಅತಿಥಿಗಳು" ಎಂದು ಪರಿಗಣಿಸುವುದರಲ್ಲಿ ಸರ್ಕಾರದವರು ಯಾವುದಾದರೂ ಒಂದು ಗೊತ್ತಾದ ಕ್ರಮವನ್ನು ಅನುಸರಿಸುತ್ತಿದ್ದಾರೆಯೆ ?

ಶ್ರೀ ಕೆ. ಚೆಂಗಲರಾಯರೆಡ್ಡಿಯವರು.—ಸಾಮಾನ್ಯವಾಗಿ Ministerial level ನಲ್ಲಿರುವವರು ಯಾರಾದರೂ ಬಂದರೆ ಅವರನ್ನು ಅತಿಥಿಗಳಾಗಿ ಪರಿಗಣಿಸುತ್ತೇವೆ. ಭಾರತದ ಹೊರಗಿನಿಂದ ಬರುವವರನ್ನು